


ಮಕ್ಕಳ ಪಾಲಿಗೆ ಗಾಂಧಿ ಯಾವಾಗಲೂ ಕುತೂಹಲದ ಬಿಂಬ. ಈ ಕುತೂಹಲವನ್ನು ಜೀವನ ಶ್ರದ್ಧೆಯನ್ನಾಗಿಸುವುದು ಹೇಗೆ?

# ಮಹಾತ್ಮ ಗಾಂಧಿ: ಅನುದಿನದ ರೂಪಕಗಳಲ್ಲಿ ಅಜರಾಮರ

**ಗಾಂಧಿ ಇಲ್ಲದ ನಾಡಿನಲ್ಲಿ ಎರಡು ಪೀಳಿಗೆಯ ನಂತರ ಹುಟ್ಟಿದ ನಮ್ಮಂಥವರ ಕಣ್ಣೂ ಅವರ ಸಾವು, ಎಲುಬುಗೂಡಿನ ಎದೆಯೊಳಗಿಳಿದ ಮೂರು ಕಾಡತೂಸುಗಳ ಶಬ್ದ ಕೇಳಿದಂತಾದಾಗೆಲ್ಲಾ ಹನಿಗೂಡುತ್ತವೆ ಎಂದರೆ ಇನ್ನೆಷ್ಟು ಶತಮಾನ ಕಳೆದರೂ ಮಹಾತ್ಮ ಅಜರಾಮರರಾಗಿಯೇ ಇರುತ್ತಾರೆ ಅನಿಸುತ್ತದೆ.**



■ ಫಾತಿಮಾ ರಲಿಯಾ
ಲೇಖಕಿ – ಗೃಹಿಣಿ

ತರಗತಿಯ ವಿಧೇಯ ವಿದ್ಯಾರ್ಥಿಯನ್ನು 'ಅವನು/ಳು ಒಬ್ಬ ದೊಡ್ಡ ಗಾಂಧಿ' ಎಂದು ಶಾಲೆಯಲ್ಲಿ ತಣ್ಣಗೆ ಮೂದಲಿಸುತ್ತಿದ್ದಾಗಲೂ, ಮನೆಯಲ್ಲಿ ಮಾತಿನ ಮಧ್ಯೆ ಯಾರಾದರೂ ತುಂಬು ಸಂಭಾವಿತರ ಬಗ್ಗೆ ಮಾತಾಡುವಾಗ 'ಅವನನ್ನು ಕಣ್ಣು ಮುಚ್ಚಿ ನಂಬಬಹುದು, ಗಾಂಧಿಯಂಥ ಮನುಷ್ಯನಾತ' ಎಂದು ಮಾವ ಹೇಳುತ್ತಿದ್ದಾಗಲೂ ನಮಗೆ ದಕ್ಕುತ್ತಿದ್ದ ಗಾಂಧೀಜಿ ಅವರ ಸುಕ್ಕುಗಟ್ಟಿದ ಕೆನ್ನೆ, ಬೊಚ್ಚು ನಗುವಿನಷ್ಟೇ ಆಪ್ತ. ಬಣ್ಣದ ಕಾರಣಕ್ಕಾಗಿ ರೈಲು ಬೋಗಿಯಿಂದ ಹೊರದಬ್ಬಿಸಿಕೊಳ್ಳದೇ ಇದ್ದಿದ್ದರೆ ಗಾಂಧಿ ಈ ಹೋರಾಟಕ್ಕೆ ಇಳಿಯುತ್ತಲೇ ಇರಲಿಲ್ಲವೇ? ಎನ್ನುವ ಪ್ರಶ್ನೆ ಆಗ ಒಮ್ಮೆಯೂ ಮೂಡಿರಲಿಲ್ಲ.

ಗಾಂಧೀಜಿ ಸತ್ಯಾಗ್ರಹಗಳಿಂದ, ಚಳವಳಿಗಳಿಂದ, ಘೋಷಣೆಗಳಿಂದ ನಮಗೆ ಆಪ್ತವಾಗುವ ಮೊದಲು ಅವರ ಊರುಗೋಲಿನಿಂದ, ಕನ್ನಡಕದಿಂದ, ನಗುವಿನಿಂದ, ಅವರ ಮೂರು ಮಂಗಗಳಿಂದ, ಮಕ್ಕಳಿಗೆ ಮಾತ್ರ ಅರ್ಥವಾಗುವ ದಂತಕಥೆಗಳಿಂದ ಆವರಿಸಿಕೊಂಡು ಬಿಟ್ಟಿದ್ದರು, ಅದೂ ಯಾವ ಪರಿಚಯದ ಹಂಗೂ ಇಲ್ಲದೆ.

ನೋಟಿನ ಗಾಂಧಿ, ಶಾಲೆಯ ಸ್ಟಾಫ್ ರೂಮಿನ ಪ್ರವೇಶ ದ್ವಾರದಲ್ಲಿನ ಗಾಂಧಿ, ಪಠ್ಯಪುಸ್ತಕದಲ್ಲಿನ ಗಾಂಧಿ, ಅಜ್ಜನ ಕಪಾಟಿನ ಬಾಗಿಲ ಮೇಲಿನ ಗಾಂಧಿ, ಮಾವನ ಮಾತಿನಲ್ಲಿ ಪದೇ ಪದೇ ಪ್ರಸ್ತಾಪವಾಗುತ್ತಿದ್ದ ಗಾಂಧಿ... ಎಷ್ಟು ತರಹೇವಾರಿ ಗಾಂಧಿ ಇದ್ದರೂ ಎಲ್ಲರನ್ನೂ ಒಳಗೊಳ್ಳುತ್ತಿದ್ದುದು, ಎಲ್ಲರಲ್ಲೂ ಒಂದು ಭರವಸೆ ತುಂಬುತ್ತಿದ್ದುದು ಮನೆಯ ಹಿರಿಯಜ್ಜನಂತಹ ಅವರ ನಗುವೇ ಏನೋ!

ಗಾಂಧಿ ಎಂದರೆ ನಮ್ಮಂತಹ ಒಬ್ಬ ಸಹಜ